ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೫೬	ಬೆಂಗಳೂರು, ಶನಿವಾರ ೧೮, ಅಕ್ಟೋಬರ್, ೨೦೨೫ (ಆಶ್ವಯುಜ, ೨೬, ಶಕವರ್ಷ, ೧೯೪೭)	ಸಂಚಿಕೆ ೧೯೯
Volume - 156	BENGALURU, SATURDAY 18, OCTOBER, 2025 (AASHWAYUJA, 26, SHAKAVARSHA, 1947)	Issue 199

ಭಾಗ ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು

ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ: ಕವಿಪ:ಆ–1:44:ಮುಂಬಡ್ತಿ:2025

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ: 5079, ವಿಧಾನಸೌಧ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು–560 001, ದಿನಾಂಕ:29.09.2025

ಅಧಿಸೂಚನೆ

ಓದಲಾಗಿದೆ.

1. ಕವಿಪ: ಆ–1:55:ಇಪಸ:2025, ದಿನಾಂಕ: 28.08.2025.
2. ಅಧಿಸೂಚನೆ ಸಂಖ್ಯೆ: ಕವಿಪ:ಆ–1:ಹೈಕಪ್ರಗುಹು:103:2014, ದಿನಾಂಕ: 01.03.2014.
3. ರಿಟ್ ಅರ್ಜಿ ಸಂ:13868/2020 ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ:01.08.2023 ರಲ್ಲಿ ನೀಡಿರುವ ತೀರ್ಪು.
4. ಸಮಾಜ ಕಲ್ಯಾಣ ಇಲಾಖೆ ಇಲಾಖೆ ಪತ್ರ ಸಂಖ್ಯೆ:ಸಕಇ 46 ಎಸ್‌ಟಿಸಿ 2021 ದಿನಾಂಕ:17.08.2021.
5. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಪತ್ರ ಸಂಖ್ಯೆ: ಸಿಆಸುಇ 121 ಸೇನೆನಿ 2021 ದಿನಾಂಕ:10.08.2021.
6. ಕರ್ನಾಟಕ ರಾಜ್ಯ ನಾಗರೀಕ ಸೇವಾ ನಿಯಮಗಳು (ಪದೋನ್ನತಿ, ವೇತನ & ಪಿಂಚಣಿ ಕ್ರಮಬದ್ಧತೆ) ನಿಯಮಗಳು, 1978.

****

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಸಂವಿಧಾನದ ಆಶಯದಂತೆ ಪರಿಶಿಷ್ಟ ಪಂಗಡ ಅನುಚ್ಛೇದ 16 ಮತ್ತು ಕಲ್ಯಾಣ ಕರ್ನಾಟಕ ಮೀಸಲಾತಿಯಡಿ 371(ಜೆ) ಅಡಿ ನಿಯಮಾನುಸಾರ ಪದೋನ್ನತಿಗಳನ್ನು ನೀಡುವಲ್ಲಿ ಆಗಿರುವ ತಪ್ಪುಗಳನ್ನು ಸರಿಪಡಿಸುವ ಕಾರ್ಯ ವ್ಯಾಪ್ತಿಯೊಂದಿಗೆ ಸಂಖ್ಯೆ:ಕವಿಪ:ಆ–1:55:ಇಪಸ:2025, ದಿನಾಂಕ:28.08.2025 ರ ಆದೇಶದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ಇಲಾಖಾ ಮುಂಬಡ್ತಿ ಸಮಿತಿಯನ್ನು ರಚಿಸಲಾಗಿದ್ದು ಅದರಂತೆ ಭಾರತೀಯ ಸಂವಿಧಾನದ ಅನುಚ್ಛೇದ 371(ಜೆ) ಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಕಲ್ಯಾಣ–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013ರ ಕಂಡಿಕೆ 13ರ ಅನ್ವಯ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯವೂ ರಾಜ್ಯ ಮಟ್ಟದ ಕಛೇರಿಯೆಂದು ಗುರುತಿಸಲಾಗಿರುತ್ತದೆ. ಸಚಿವಾಲಯದ ಸೇವೆಯಲ್ಲಿನ ಹುದ್ದೆಗಳಲ್ಲಿ ಕಲ್ಯಾಣ–ಕರ್ನಾಟಕ ಪ್ರದೇಶ ವ್ಯಾಪ್ತಿಯ ಸ್ಥಳೀಯ ವ್ಯಕ್ತಿಗಳಿಗೆ ಲಭ್ಯವಿರುವ ಶೇ.8 ರಷ್ಟು ಹುದ್ದೆಗಳನ್ನು ವಿವಿಧ ವೃಂದಗಳಲ್ಲಿ ಮೀಸಲಿರಿಸಿ ಮೇಲೆ ಓದಲಾದ ಕ್ರ. ಸಂ (2) ರಲ್ಲಿ ಅಧಿಸೂಚಿಸಲಾಗಿರುತ್ತದೆ. ಮೇಲೆ ಓದಲಾದ ಕ್ರ.ಸಂ (3)ರಲ್ಲಿ ಉಲ್ಲೇಖಿಸಿದ ರೀತ್ಯಾ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ:13868/2020 ರಲ್ಲಿ ದಿನಾಂಕ:01.08.2023ರ ತೀರ್ಪಿನಲ್ಲಿ ಕಲ್ಯಾಣ ಕರ್ನಾಟಕ ಮೀಸಲಾತಿಯಡಿ ಅರ್ಹರಿರುವ ನೌಕರರ ಅಭ್ಯರ್ಥಿತನವನ್ನು ದಿನಾಂಕ:21.04.2014 ರಿಂದ ಜಾರಿಗೆ ಬರುವಂತೆ ಪರಿಗಣಿಸಲು ಆದೇಶಿಸಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಅಧೀನ ಕಾರ್ಯದರ್ಶಿ ವೃಂದದಲ್ಲಿ ಮತ್ತು ಉಪ ಕಾರ್ಯದರ್ಶಿ ವೃಂದದಲ್ಲಿ ಈ ಕೆಳಕಂಡ ವೃಂದ ಬಲಗಳಿರುತ್ತವೆ.

ವೃಂದ	ವೃಂದ ಬಲ (ಉಳಿಕೆ ಮೂಲ ವೃಂದ)	ವೃಂದ ಬಲ (ಸ್ಥಳೀಯ ವೃಂದ)	ಒಟ್ಟು ಮಂಜೂರಾದ ಹುದ್ದೆಗಳು
ಅಧೀನ ಕಾರ್ಯದರ್ಶಿ	6	1	7
ಉಪ ಕಾರ್ಯದರ್ಶಿ	5	–	5

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಒಟ್ಟು ೫ ಉಪ ಕಾರ್ಯದರ್ಶಿ ಹುದ್ದೆಗಳು ಮಂಜೂರಾಗಿದ್ದು ಹಾಗೂ ಅದರಲ್ಲಿ ಪ್ರಸ್ತುತ ೩ ಹುದ್ದೆಗಳು ಖಾಲಿ ಇರುತ್ತವೆ.

ಭಾರತ ಸಂವಿಧಾನ ಅನುಚ್ಛೇದ 371(ಜೆ) ಮೀಸಲಾತಿ ಅಡಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ W.P. No:13868 of 2020 (S-KSAT) ರ ರೀತ್ಯಾ ಅಧೀನ ಕಾರ್ಯದರ್ಶಿ, ಶಾಖಾಧಿಕಾರಿ ಮತ್ತು ಕೆಳಹಂತದ ಹುದ್ದೆಗಳಿಗೆ ರಿಕ್ತ ಸ್ಥಾನಗಳ ಲಭ್ಯತೆ ಅವರುಗಳ ಜೇಷ್ಠತೆ ಮತ್ತು ಕಾಲ್ಪನಿಕ ಜೇಷ್ಠತೆಗಳ ಅನ್ವಯ ಪದೋನ್ನತಿಗಳನ್ನು ನೀಡಬೇಕಾಗಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಕಲ್ಯಾಣ ಕರ್ನಾಟಕ ಮೀಸಲಾತಿ ಅಡಿ ಪದೋನ್ನತಿಗೆ ಅರ್ಹವಿರುವ ಅಭ್ಯರ್ಥಿಗಳು (Zone of consideration) ನಿಯಮಾನುಸಾರ ಪದೋನ್ನತಿ ನೀಡುವಂತೆ ಸಲ್ಲಿಸಿರುವ ಮನವಿಗಳನ್ನು ಮತ್ತು ಸದರಿ ಪ್ರವರ್ಗದಡಿ ಮೀಸಲಾಗಿರುವ ವೃಂದದಲ್ಲಿನ ಹುದ್ದೆಗಳ ಲಭ್ಯತೆಯ ದಿನಾಂಕಗಳನ್ನು ಮೇಲಿನ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಮರು ಪರಿಶೀಲಿಸಲಾಯಿತು. ನ್ಯಾಯಾಲಯದ ಆದೇಶದ ಪ್ರಕಾರ ದಿನಾಂಕ: 21.04.2014 ರಿಂದ ಅನ್ವಯವಾಗುವಂತೆ ಕಾಲ್ಪನಿಕ ಜೇಷ್ಠತೆಗಳನ್ನು ನಿಗಧಿಪಡಿಸುವುದು ಸಮಂಜಸವಾಗಿದೆ.

ಮುಂದುವರೆದು, The Karnataka State Civil Services (Regulation of Promotion, Pay and Pension) Rules, 1978 ನಿಯಮ 2(1) ರಲ್ಲಿ ನಿಯಮವು ಈ ಕೆಳಕಂಡಂತೆ ಇರುತ್ತದೆ;

Rule 2. Promotion.- Promotion of the Civil Servant may be made with effect from a retrospective date.-

(1) If his claim for promotion.-

(a) Was withheld on account of disciplinary proceedings or criminal Prosecution of both pending against him and he is exonerated or acquitted subsequently, or

(b) Was not considered on the ground that he was working in some other department on deputation or otherwise; or

(c) Was not considered on the ground that he was wrongly or incorrectly described in the provisional or final seniority list or gradation list;

ಮೇಲ್ಕಂಡ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ಹಾಗೂ The Karnataka State Civil Services (Regulation of Promotion, Pay and Pension) Rules, 1978 ನಿಯಮ 2(1) ನಿಯಮದ ಪ್ರಕಾರ, ಭಾರತ ಸಂವಿಧಾನದ ಅನುಚ್ಛೇದ 16 ಹಾಗೂ 371(ಜೆ) ಪ್ರವರ್ಗದ ಅಭ್ಯರ್ಥಿಗಳಿಗೆ ಲಭ್ಯವಿರುವ ಅರ್ಹತಾ ದಿನಾಂಕಗಳನ್ನು ನಿಯಮಾನುಸಾರ ಹಂಚಿಕೆ ಮಾಡುವ ಮೂಲಕ ಈಗಾಗಲೇ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ನೀಡಿರುವ ಪದೋನ್ನತಿಗಳನ್ನು ಈ ಕೆಳಗೆ ವಿವರಿಸಿದಂತೆ ಮರು ಹೊಂದಾಣಿಕೆ ಮಾಡಲು ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

1. **ಶ್ರೀ ಹೆಚ್.ಡಿ. ಪಾಟೀಲ್, 371(ಜೆ) ಇವರ ಪ್ರಕರಣ:** ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಶ್ರೀ ಹೆಚ್.ಡಿ. ಪಾಟೀಲ್ ಇವರ 2015-16 ರಿಂದ 2017-18 ಸಾಲುಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ಪ್ರತಿಕೂಲ ಷರಾಗಳು ಇದ್ದು,

ಅವುಗಳನ್ನು ಸಕ್ಷಮ ಪ್ರಾಧಿಕಾರದಿಂದ ಸಲಹಾತ್ಮಕ ಷರಾಗಳೆಂದು ಪರಿಗಣಿಸಿದ ಹಿನ್ನಲೆಯಲ್ಲಿ ಹಾಗೂ ದಿನಾಂಕ:08.04.2019ರ ಇಲಾಖಾ ವಿಚಾರಣಾ ವರದಿಯನ್ನು ದಿನಾಂಕ: 22.06.2021 ರಂದು ಎಚ್ಚರಿಕೆ ಸೂಚನಾ ಪತ್ರವನ್ನು ನೀಡುವ ಮೂಲಕ ಪ್ರಕರಣವನ್ನು ಮುಕ್ತಾಯಗೊಳಿಸಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಭಾರತ ಸಂವಿಧಾನ ಅನುಚ್ಛೇದ 371(ಜೆ) ಮೀಸಲಾತಿಯಡಿ ಸ್ಥಳೀಯ ವೃಂದದ ಅಧೀನ ಕಾರ್ಯದರ್ಶಿ ವೃಂದದಲ್ಲಿ ಒಂದು ಹುದ್ದೆ ಮೀಸಲಿರುತ್ತದೆ. ಸದರಿ ಅಧಿಕಾರಿಯು ದಿನಾಂಕ: 08.07.2013 ರಂದೇ ಸಾಮಾನ್ಯ ವರ್ಗದಲ್ಲಿ ಶಾಖಾಧಿಕಾರಿ ವೃಂದಕ್ಕೆ ಮುಂಬಡ್ತಿ ಹೊಂದಿರುತ್ತಾರೆ ಹಾಗೂ ಕಲ್ಯಾಣ ಕರ್ನಾಟಕ 371(ಜೆ) ಅಡಿ ಶಾಖಾಧಿಕಾರಿ ವೃಂದದಲ್ಲಿನ ಜೇಷ್ಠತೆಯಲ್ಲಿ ಮೊದಲಿಗರಾಗಿರುತ್ತಾರೆ. ಅದರಂತೆ, ಸ್ಥಳೀಯ ವೃಂದಕ್ಕೆ ಪ್ರತ್ಯೇಕ ಜೇಷ್ಠತೆಯನ್ನು ನಿಗಧಿಪಡಿಸಿದ ನಂತರ ಸದರಿಯವರು ಅಧೀನ ಕಾರ್ಯದರ್ಶಿ ಹುದ್ದೆಗೆ ದಿನಾಂಕ: 01.03.2014 ರಿಂದ ಅರ್ಹತೆ ಹೊಂದಿರುತ್ತಾರೆ.

ಆದರೆ, ಸದರಿಯವರು ಅರ್ಹದಾಯಕ ಸೇವೆಯನ್ನು ದಿನಾಂಕ:08.07.2016 ರಂದು ಪೂರ್ಣಗೊಳಿಸಿರುವುದರಿಂದ, ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಅಧೀನ ಕಾರ್ಯದರ್ಶಿ ಹುದ್ದೆಗೆ ದಿನಾಂಕ:08.07.2016 ರಂದು ಅರ್ಹತೆ ಹೊಂದಿರುತ್ತಾರೆ. ಪ್ರಸ್ತುತ, ಸದರಿಯವರು ದಿನಾಂಕ:21.03.2017 ರಂದು ಅಧೀನ ಕಾರ್ಯದರ್ಶಿ ಹುದ್ದೆಗೆ ನೈಜವಾಗಿ ಸಾಮಾನ್ಯ ಪ್ರವರ್ಗದಡಿ ಮುಂಬಡ್ತಿ ಹೊಂದಿರುತ್ತಾರೆ. 371(ಜೆ) ಮೀಸಲಾತಿಯಡಿ ಮರು ಹೊಂದಾಣಿಕೆ ನಂತರ ಅಧೀನ ಕಾರ್ಯದರ್ಶಿ ವೃಂದದಲ್ಲಿ ಸದರಿಯವರು ನಿಯಮಾನುಸಾರ ಅರ್ಹದಾಯಕ ಸೇವಾವಧಿಯನ್ನು ಪೂರೈಸಿದ ದಿನಾಂಕ: 08.07.2016ನ್ನು ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:01.08.2023ರ ಆದೇಶದ ಪ್ರಕಾರ ಮರುಹೊಂದಾಣಿಕೆ ಮಾಡಿ ಈಗಾಗಲೇ ಆಗಿರುವ ನ್ಯೂನತೆಯನ್ನು ಸರಿಪಡಿಸುವಂತೆ ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ತದನಂತರ, ಶ್ರೀ ಹೆಚ್.ಡಿ. ಪಾಟೀಲ್, ಇವರು ಉಪ ಕಾರ್ಯದರ್ಶಿ ಹುದ್ದೆಗೆ ಸಾಮಾನ್ಯ ಪ್ರವರ್ಗದಡಿ ನೈಜವಾಗಿ ದಿನಾಂಕ: 30.11.2021 ರಂದು ಮುಂಬಡ್ತಿ ಹೊಂದಿರುತ್ತಾರೆ. 371(ಜೆ) ಮೀಸಲಾತಿಯಡಿ ಮರುಹೊಂದಾಣಿಕೆ ನಂತರ ಶ್ರೀ ವಿ.ಕೆ. ಪಾಟೀಲ್ ಇವರು ದಿನಾಂಕ:31.07.2020 ರಂದು ವಯೋ ನಿವೃತ್ತಿಯಿಂದ ತೆರವಾದ ಉಪ ಕಾರ್ಯದರ್ಶಿ ಹುದ್ದೆಗೆ ಸದರಿಯವರಿಗೆ ಉಪ ಕಾರ್ಯದರ್ಶಿ ಹುದ್ದೆಗೆ ಅರ್ಹತಾ ದಿನಾಂಕವನ್ನು ನಿಗಧಿಪಡಿಸುವಂತೆ ಇಲಾಖಾ ಪದೋನ್ನತಿ ಸಮಿತಿ ಶಿಫಾರಸ್ಸು ಮಾಡಿರುತ್ತದೆ.

ಮೇಲಿನ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಹೆಚ್.ಡಿ. ಪಾಟೀಲ್ ಇವರಿಗೆ ದಿನಾಂಕ:08.07.2016 ರಂದು ಅಧೀನ ಕಾರ್ಯದರ್ಶಿ ವೃಂದಕ್ಕೆ ಹಾಗೂ ದಿನಾಂಕ: 01.08.2020 ರಂದು ಉಪಕಾರ್ಯದರ್ಶಿ ವೃಂದಕ್ಕೆ ಅರ್ಹತಾ ದಿನಾಂಕಗಳನ್ನು ಪುನರ್ ನಿಗಧಿಪಡಿಸಲು ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

2) ಶ್ರೀಮತಿ ಜ್ಯೋತಿ 371(ಜೆ) ಇವರ ಪ್ರಕರಣ: ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಭಾರತ ಸಂವಿಧಾನ ಅನುಚ್ಛೇದ 371(ಜೆ) ಮೀಲಾತಿಯಡಿ ಸ್ಥಳೀಯ ವೃಂದದ ಸಹಾಯಕ ವೃಂದದಲ್ಲಿ ಒಂದು ಹುದ್ದೆ ಮೀಸಲಿರುತ್ತದೆ. ಸದರಿ ನೌಕರರು ದಿನಾಂಕ: 25.07.2008 ರಂದೇ ಸಾಮಾನ್ಯ ವರ್ಗದಲ್ಲಿ **ಸಹಾಯಕ ವೃಂದಕ್ಕೆ** ಮುಂಬಡ್ತಿ ಹೊಂದಿರುತ್ತಾರೆ. ಸದರಿ ನೌಕರರು ಕಲ್ಯಾಣ ಕರ್ನಾಟಕ 371(ಜೆ) ಅಡಿ **ಸಹಾಯಕ** ವೃಂದದಲ್ಲಿನ ಜೇಷ್ಠತೆಯಲ್ಲಿ ಮೊದಲಿಗರಾಗಿರುತ್ತಾರೆ. ಸ್ಥಳೀಯ ವೃಂದಕ್ಕೆ ಪ್ರತ್ಯೇಕ ಜೇಷ್ಠತೆಯನ್ನು ನಿಗಧಿಪಡಿಸಿದ ನಿಗಧಿಪಡಿಸಿದ ಜೇಷ್ಠತಾ ಪಟ್ಟಿಯಲ್ಲಿ ಶ್ರೀಮತಿ ಜ್ಯೋತಿ ಇವರು ಹಿರಿಯ ಸಹಾಯಕರ ಹುದ್ದೆಗೆ ದಿನಾಂಕ: 01.03.2014 ರಿಂದ ಅರ್ಹತೆ ಹೊಂದಿರುತ್ತಾರೆ. ಸದರಿಯವರು ಹಿರಿಯ ಸಹಾಯಕ ವೃಂದದಲ್ಲಿನ ಹುದ್ದೆಗೆ ನಿಗಧಿಪಡಿಸಿರುವ ಅರ್ಹದಾಯಕ ಸೇವೆಯನ್ನು ದಿನಾಂಕ: 25.07.2011 ರಂದು ಪೂರ್ಣಗೊಳಿಸಿರುತ್ತಾರೆ. ಸದರಿಯವರಿಗೆ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹಿರಿಯ ಸಹಾಯಕ ಹುದ್ದೆಗೆ ದಿನಾಂಕ:07.04.2015 ರಂದು ಸಾಮಾನ್ಯ ಪ್ರವರ್ಗದಡಿ ನೈಜವಾಗಿ ಮುಂಬಡ್ತಿ ಹೊಂದಿರುತ್ತಾರೆ. ಆದರೆ, ಕಲ್ಯಾಣ ಕರ್ನಾಟಕ ಮೀಸಲಾತಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ **ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ.13868/2020 ದಿನಾಂಕ: 01.08.2023** ರಲ್ಲಿ ನೀಡಿರುವ ಆದೇಶದ ಪ್ರಕಾರ, ದಿನಾಂಕ:21.04.2014 ರಂದೇ 371(ಜೆ) ಮೀಸಲಾತಿಯಡಿ ಹಿರಿಯ ಸಹಾಯಕ ವೃಂದಕ್ಕೆ ಜೇಷ್ಟತೆ ಮರುಹೊಂದಾಣಿಕೆ ಮಾಡುವುದರ ಮೂಲಕ ಈಗಾಗಲೇ ಇವರ ಮುಂಬಡ್ತಿಯಲ್ಲಿ ಆಗಿರುವ ನ್ಯೂನ್ಯತೆಗಳನ್ನು ಸರಿಪಡಿಸುವಂತೆ ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಶ್ರೀ ಹೆಚ್.ಡಿ. ಪಾಟೀಲ್, ಇವರು ದಿನಾಂಕ: 08.07.2016 ರಂದು ಶಾಖಾಧಿಕಾರಿ ವೃಂದದಿಂದ ಅಧೀನ ಕಾರ್ಯದರ್ಶಿ ವೃಂದಕ್ಕೆ ಮುಂಬಡ್ತಿಯ ಹಿನ್ನಲೆಯಲ್ಲಿ ದಿನಾಂಕ: 08.07.2016 ರಿಂದ ಸ್ಥಳೀಯ ವೃಂದದಲ್ಲಿ ಶಾಖಾಧಿಕಾರಿ ವೃಂದದಲ್ಲಿ ಒಂದು ಹುದ್ದೆ ತೆರವಾಗಿರುತ್ತದೆ. ಸಚಿವಾಲಯದಲ್ಲಿ ಶಾಖಾಧಿಕಾರಿ ವೃಂದಕ್ಕೆ ಅರ್ಹದಾಯಕ ಸೇವೆಯನ್ನು ಶ್ರೀಮತಿ

ಜ್ಯೋತಿ ಇವರು ದಿನಾಂಕ: 21.04.2017 ರಂದು ಪೂರ್ಣಗೊಳಿಸಿರುತ್ತಾರೆ ಹಾಗೂ ಸ್ಥಳೀಯ ವೃಂದದ ಶಾಖಾಧಿಕಾರಿ ಹುದ್ದೆಯ ಜೇಷ್ಠತೆಯಲ್ಲಿ ಇವರು ಮೊದಲಿಗರಾಗಿರುತ್ತಾರೆ. 371(ಜೆ) ಅಡಿ ಜೇಷ್ಠತೆಯನ್ನು ಉಚ್ಚ ನ್ಯಾಯಾಲಯದ ದಿನಾಂಕ: 01.08.2023ರ ಆದೇಶದನ್ವಯ ಮರುಹೊಂದಾಣಿಕೆ ಮಾಡುವುದರ ಮೂಲಕ ದಿನಾಂಕ: 21.04.2017 ರಂದು ಶಾಖಾಧಿಕಾರಿ ವೃಂದಕ್ಕೆ ಮುಂಬಡ್ತಿಗೆ ಅರ್ಹರಾಗಿರುತ್ತಾರೆ. ಆದುದರಿಂದ, ಶ್ರೀಮತಿ ಜ್ಯೋತಿ ಇವರಿಗೆ ಶಾಖಾಧಿಕಾರಿ ವೃಂದಕ್ಕೆ ಜೇಷ್ಠತೆಯನ್ನು ದಿನಾಂಕ:21.04.2017ಕ್ಕೆ ಮರು ಹೊಂದಾಣಿಕೆ ಮಾಡಲಾಗಿರುತ್ತದೆ.

ಮುಂದುವರೆದು, ದಿನಾಂಕ:21.04.2020 ರಂದು ಶ್ರೀಮತಿ ಜ್ಯೋತಿ ಇವರು **ಶಾಖಾಧಿಕಾರಿ** ವೃಂದದಲ್ಲಿ ನಿಗಧಿಪಡಿಸಿರುವ ಅರ್ಹದಾಯಕ ಸೇವೆಯನ್ನು ಪೂರ್ಣಗೊಳಿಸಿರುತ್ತಾರೆ ಹಾಗೂ **ಅಧೀನ ಕಾರ್ಯದರ್ಶಿ** ಹುದ್ದೆಗೆ ಅರ್ಹತೆ ಹೊಂದಿರುತ್ತಾರೆ. ಆದರೆ ಕಲ್ಯಾಣ ಕರ್ನಾಟಕ ಮೀಸಲಾತಿ ಅಡಿ ಅಧೀನ ಕಾರ್ಯದರ್ಶಿ ಹುದ್ದೆಯಲ್ಲಿರುವ ಶ್ರೀ ಹೆಚ್.ಡಿ.ಪಾಟೀಲ್, ಇವರು ದಿನಾಂಕ:01.08.2020

ರಂದು ಉಪ ಕಾರ್ಯದರ್ಶಿ ಹುದ್ದೆಯ ಜೇಷ್ಠತೆಗೆ ಮರುಹೊಂದಾಣಿಕೆ ಮಾಡುವುದರಿಂದ ಸ್ಥಳೀಯ ವೃಂದದಲ್ಲಿ ತೆರವಾಗುವ ಅಧೀನ ಕಾರ್ಯದರ್ಶಿ ಹುದ್ದೆಗೆ ಎದುರಾಗಿ ಮೇಲಿನ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಶ್ರೀಮತಿ ಜ್ಯೋತಿ ಇವರನ್ನು ದಿನಾಂಕ:01.08.2020 ರಂದು ಕಲ್ಯಾಣ ಕರ್ನಾಟಕ ಮೀಸಲಾತಿ ಅಡಿಯಲ್ಲಿ ಕಾಲ್ಪನಿಕ ಜೇಷ್ಠತೆಯನ್ನು ನಿಗಧಿಪಡಿಸುವ ಮೂಲಕ ಮುಂಬಡ್ತಿ ನೀಡುವಲ್ಲಿ ಆಗಿರುವ ನ್ಯೂನ್ಯತೆಯನ್ನು ಸರಿಪಡಿಸುವಂತೆ ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ

ಅದರಂತೆ, ಶ್ರೀಮತಿ ಜ್ಯೋತಿ ಇವರಿಗೆ ದಿನಾಂಕ: 21.04.2014 ರಿಂದ ಹಿರಿಯ ಸಹಾಯಕ ವೃಂದಕ್ಕೆ, ದಿನಾಂಕ:21.04.2017 ರಿಂದ ಅನ್ವಯವಾಗುವಂತೆ ಶಾಖಾಧಿಕಾರಿ ವೃಂದಕ್ಕೆ ದಿನಾಂಕ:01.08.2020 ರಿಂದ ಅನ್ವಯವಾಗುವಂತೆ ಅಧೀನ ಕಾರ್ಯದರ್ಶಿ ವೃಂದಕ್ಕೆ ಜೇಷ್ಠತೆಗಳನ್ನು ಪುನರ್ ನಿಗಧಿಪಡಿಸಲಾಗಿದೆ.

ಮುಂದುವರೆದು, ಶ್ರೀಮತಿ ಜ್ಯೋತಿ ಇವರು ಸೇವಾ ಅರ್ಹತೆ, ಕಾನೂನು ಪದವಿ ಹೊಂದಿರುವುದನ್ನು ಮತ್ತು ಇವರು ದಿನಾಂಕ:01.08.2023 ರಂದು ಉಪ ಕಾರ್ಯದರ್ಶಿ ವೃಂದಕ್ಕೆ ಮುಂಬಡ್ತಿಗೆ ಅರ್ಹರಿರುತ್ತಾರೆ ಹಾಗೂ ದಿನಾಂಕ:31.07.2022 ರಂದು ಶ್ರೀ ಬಿ.ಟಿ. ಶಿವಕುಮಾರ್, ಉಪ ಕಾರ್ಯದರ್ಶಿ ರವರ ವಯೋನಿವೃತ್ತಿಯಿಂದ ಉಪ ಕಾರ್ಯದರ್ಶಿ ವೃಂದದಲ್ಲಿ ಒಂದು ಹುದ್ದೆ ತೆರವಾಗಿರುತ್ತದೆ. ಶ್ರೀಮತಿ ಜ್ಯೋತಿ ಇವರಿಗೆ ಇವರು ನೈಜವಾಗಿ ಉಪ ಕಾರ್ಯದರ್ಶಿ ವೃಂದಕ್ಕೆ ಅರ್ಹರಾದ ದಿನಾಂಕ:01.08.2023 ರಿಂದ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಲು ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

೩. **ಶ್ರೀಮತಿ ಮೀನಾ ನಾಯಕ್ (ಪರಿಶಿಷ್ಠ ಪಂಗಡ) ಇವರ ಪ್ರಕರಣ:** ಮೇಲೆ ಓದಲಾದ ಕ್ರ.ಸಂ 4 & 5 ರಂತೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ನೀಡಿರುವ ಅಭಿಪ್ರಾಯಗಳು ನಿಯಮಾನುಸಾರ ಇರುವುದನ್ನು ಸಭೆಯಲ್ಲಿ ಅಭಿಪ್ರಾಯಗಳ ಪ್ರಕಾರ ಶ್ರೀಮತಿ ಮೀನಾ ನಾಯಕ್ ಇವರಿಗೆ ಅಧೀನ ಕಾರ್ಯದರ್ಶಿ ಹುದ್ದೆಗೆ ಪರಿಶಿಷ್ಠ ಪಂಗಡ ಮೀಸಲಾತಿ ಅನ್ವಯ ಪರಿಶಿಷ್ಟ ಪಂಗಡದ 2ನೇ ಬಿಂದುವಿಗೆ ಎದುರಾಗಿ ಸಾಮಾನ್ಯ ವರ್ಗದ ಶ್ರೀಮತಿ ಕೆ.ಜೆ. ಜಲಜಾಕ್ಷಿ, ಇವರಿಗೆ ನಿಯಮ 32 ರಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿದ್ದ ಸದರಿ ಮುಂಬಡ್ತಿ ಹುದ್ದೆಗೆ Regularise ಮಾಡಿರುವ ದಿನಾಂಕಕ್ಕೆ ಪರಿಶಿಷ್ಠ ಪಂಗಡಕ್ಕೆ ಸೇರಿದ ಶ್ರೀಮತಿ ಮೀನಾ ನಾಯಕ್ ಇವರು ಅರ್ಹತಾ ಸೇವಾ ಅವಧಿ ದಿನಾಂಕ:04.05.2021 ರಂದು ಲಭ್ಯವಿರುತ್ತದೆ ಹಾಗೂ ಸದರಿಯವರು ಮುಂಬಡ್ತಿಗೆ ಸಂಬಂಧಪಟ್ಟಂತೆ ದಿನಾಂಕ:23.06.2021 ಹಾಗೂ 03.07.2021 ರಂದು ಸಲ್ಲಿಸಿರುವ ಆಕ್ಷೇಪಣೆಯನ್ನು ನೀಡಿರುವ ಹಿನ್ನಲೆಯಲ್ಲಿ ಅಧೀನ ಕಾರ್ಯದರ್ಶಿ ಹುದ್ದೆಗೆ ಪರಿಶಿಷ್ಠ ಪಂಗಡದ 2ನೇ ಬಿಂದುವಿಗೆ ಅರ್ಹತೆ ಹೊಂದಿರುವ ಶ್ರೀಮತಿ ಮೀನಾ ನಾಯಕ್ ಇವರಿಗೆ ಅಧೀನ ಕಾರ್ಯದರ್ಶಿ ವೃಂದಕ್ಕೆ ಈಗಾಗಲೇ ಸಾಮಾನ್ಯ ವರ್ಗದ ಅಭ್ಯರ್ಥಿಯಾದ ಶ್ರೀಮತಿ ಕೆ.ಜೆ. ಜಲಜಾಕ್ಷಿ, ಇವರಿಗೆ ನೀಡಿರುವ ಅಧೀನ ಕಾರ್ಯದರ್ಶಿ ಹುದ್ದೆಯನ್ನು ಮರು ಹೊಂದಾಣಿಕೆ ಮಾಡುವಂತೆ ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ದಿನಾಂಕ:10.07.2020 ರಂದು ಶ್ರೀ ಬಿ.ಟಿ.ಶಿವಕುಮಾರ್ ಇವರನ್ನು ಅಧೀನ ಕಾರ್ಯದರ್ಶಿ ವೃಂದದಿಂದ ಉಪ ಕಾರ್ಯದರ್ಶಿ ವೃಂದಕ್ಕೆ ಕ.ನಾ.ಸೇ.ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿದ್ದರಿಂದ ತೆರವಾದ ಅಧೀನ ಕಾರ್ಯದರ್ಶಿ ಹುದ್ದೆಯು ಸಚಿವಾಲಯದ ರೋಸ್ಟರ್ ಬಿಂದುವಿನ ಪ್ರಕಾರ ಪರಿಶಿಷ್ಟ ಪಂಗಡದ 2ನೇ ಬಿಂದುವಿಗೆ ಮೀಸಲಾಗಿರುತ್ತದೆ ಹಾಗೂ ಸದರಿ ಒಂದು ಅಧೀನ ಕಾರ್ಯದರ್ಶಿ ಹುದ್ದೆ ಖಾಲಿ

ಇರುತ್ತದೆ. ಸದರಿ ಖಾಲಿ ಇರುವ ಪರಿಶಿಷ್ಟ ಪಂಗಡದ ಹುದ್ದೆಗೆ ಎದುರಾಗಿ ದಿನಾಂಕ:10.07.2020 ರಂದು ಸಾಮಾನ್ಯ ಪ್ರವರ್ಗಕ್ಕೆ ಸೇರಿದ ಶ್ರೀಮತಿ ಕೆ.ಜೆ. ಜಲಜಾಕ್ಷಿ ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶ ಹೊರಡಿಸುವವರೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 32ರ ಪ್ರಕಾರ ಅಧೀನ ಕಾರ್ಯದರ್ಶಿ ಹುದ್ದೆಯ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿರುತ್ತದೆ.

ಮುಂದುವರೆದು, ದಿನಾಂಕ: 27.10.2021 ರಂದು ಶ್ರೀ ಬಿ.ಟಿ. ಶಿವಕುಮಾರ್ ಇವರು ಅಧೀನ ಕಾರ್ಯದರ್ಶಿ ವೃಂದದಿಂದ ಉಪ ಕಾರ್ಯದರ್ಶಿ ವೃಂದಕ್ಕೆ ಕ.ನಾ.ಸೇ.ನಿಯಮ 42ರಡಿ ಮುಂಬಡ್ತಿಯಿಂದ ತೆರವಾದ ಅಧೀನ ಕಾರ್ಯದರ್ಶಿ ಹುದ್ದೆಯು ಸಚಿವಾಲಯದ ರೋಸ್ಟರ್ ಬಿಂದುವಿನ ಪ್ರಕಾರ ಪರಿಶಿಷ್ಟ ಪಂಗಡದ 2ನೇ ಬಿಂದುವಿಗೆ ಮೀಸಲಾಗಿರುತ್ತದೆ ಹಾಗೂ ಸದರಿ ಒಂದು ಅಧೀನ ಕಾರ್ಯದರ್ಶಿ ಹುದ್ದೆ ಖಾಲಿ ಇರುತ್ತದೆ. ಸದರಿ ಖಾಲಿ ಇರುವ ಪರಿಶಿಷ್ಠ ಪಂಗಡದ ಹುದ್ದೆಗೆ ಎದುರಾಗಿ ದಿನಾಂಕ: 27.10.2021 ರಂದು ಸಾಮಾನ್ಯ ಪ್ರವರ್ಗಕ್ಕೆ ಸೇರಿದ ಶ್ರೀಮತಿ ಕೆ.ಜೆ. ಜಲಜಾಕ್ಷಿ ಇವರಿಗೆ ದಿನಾಂಕ: 10.07.2020 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಅಧೀನ ಕಾರ್ಯದರ್ಶಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ನೇಮಕ ಮಾಡಲಾಗಿದೆ.

ಶಾಖಾಧಿಕಾರಿ ವೃಂದದಲ್ಲಿ ಪರಿಶಿಷ್ಠ ಪಂಗಡ ಪ್ರವರ್ಗದ ಅಭ್ಯರ್ಥಿಯಾದ ಶ್ರೀಮತಿ ಮೀನಾ ನಾಯಕ್ ಇವರು ದಿನಾಂಕ: 30.11.2021 ರಂದು ಶ್ರೀ ಬಸವರಾಜ ಬಿ.ಎ. ಇವರ ಅಧೀನ ಕಾರ್ಯದರ್ಶಿ ವೃಂದದಿಂದ ಉಪ ಕಾರ್ಯದರ್ಶಿ ವೃಂದಕ್ಕೆ ಮುಂಬಡ್ತಿಯಿಂದ ತೆರವಾಗಿರುವ ಹುದ್ದೆಯ ಎದುರಾಗಿ ಅಧೀನ ಕಾರ್ಯದರ್ಶಿ ವೃಂದಕ್ಕೆ ಸಾಮಾನ್ಯ ಪ್ರವರ್ಗದಡಿ ಸಚಿವಾಲಯದ 4ನೇ ರೋಸ್ಟರ್ ಬಿಂದುವಿಗೆ ಎದುರಾಗಿ ಮುಂಬಡ್ತಿ ನೀಡಲಾಗಿರುತ್ತದೆ.

ಆದರೆ, ಶ್ರೀಮತಿ ಮೀನಾ ನಾಯಕ್ ಇವರು ಪರಿಶಿಷ್ಟ ಪಂಗಡದ ಮೀಸಲಾತಿ ಅಡಿ ವಾಸ್ತವವಾಗಿ ದಿನಾಂಕ:04.05.2021 ರಂದು ಅರ್ಹತೆ ಹೊಂದಿರುತ್ತಾರೆ ಮತ್ತು ಶ್ರೀಮತಿ ಮೀನಾ ನಾಯಕ್ ಇವರಿಗೆ ಸಚಿವಾಲಯದ ರೋಸ್ಟರ್‌ನ 2ನೇ ಬಿಂದುವಿಗೆ ಮೀಸಲಾಗಿದ್ದ ಪರಿಶಿಷ್ಠ ಪಂಗಡದ ಹುದ್ದೆಯ ಎದುರಾಗಿ ಈಗಾಗಲೇ ಮುಂಬಡ್ತಿ ಹೊಂದಿರುವ ಶ್ರೀಮತಿ ಕೆ.ಜೆ. ಜಲಜಾಕ್ಷಿ ಇವರಿಗೆ ಹೊಂದಾಣಿಕೆ ಮಾಡಿರುವುದರಿಂದ ಸಂವಿಧಾನ ಪ್ರದತ್ತವಾಗಿ ಅರ್ಹತೆ ಅನುಸಾರ ಪದೋನ್ನತಿ ಹೊಂದಬೇಕಾಗಿರುವ ಶ್ರೀಮತಿ ಮೀನಾ ನಾಯಕ್ ಇವರ ಅರ್ಹತೆಯನ್ನು ದಿನಾಂಕ:04.05.2021 ಹೊಂದಿದ್ದರೂ ಸಹ ನಿಯಮಾನುಸಾರ ಮೀಸಲಾತಿಯನ್ನು ಮರುಹೊಂದಾಣಿಕೆ ಮಾಡದೆ ಇರುವುದರಿಂದ ವಾಸ್ತವವಾಗಿ ಶ್ರೀಮತಿ ಮೀನಾ ನಾಯಕ್ ಇವರು ಮುಂಬಡ್ತಿ ಸೌಲಭ್ಯದಿಂದ ವಂಚಿತರಾಗಿರುತ್ತಾರೆ.

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಪರಿಶಿಷ್ಠ ಪಂಗಡದ ಮೀಸಲಾತಿ ಅಡಿ ಅಧೀನ ಕಾರ್ಯದರ್ಶಿ ವೃಂದದಲ್ಲಿ ಪದೋನ್ನತಿ ವಿಚಾರದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ಅಧೀನ ಕಾರ್ಯದರ್ಶಿ ವೃಂದದಲ್ಲಿ ಮುಂಬಡ್ತಿ ವಿಷಯಕ್ಕೆ ನೀಡಿರುವ ಅಭಿಪ್ರಾಯ ಈ ಕೆಳಕಂಡಂತೆ ಇರುತ್ತದೆ.

.....**ಮೊದಲನೇ ವೃತ್ತದ 26ನೇ ರೋಸ್ಟರ್ ಬಿಂದುವಿನಲ್ಲಿ ಶ್ರೀ ಹೆಚ್.ಮಲ್ಲೇಶಪ್ಪ (ಪರಿಶಿಷ್ಠ ಪಂಗಡ ಪ್ರವರ್ಗ) ಇವರಿಗೆ ದಿನಾಂಕ:07.04.2015 ರಲ್ಲಿ ಮುಂಬಡ್ತಿ ನೀಡಲಾಗಿದೆ ಇವರನ್ನು ಸಹ 2ನೇ ವೃತ್ತದ 2ನೇ ಬಿಂದುವಿನ ಪರಿಶಿಷ್ಠ ಪಂಗಡದ ವರ್ಗಕ್ಕೆ ಲೆಕ್ಕ ಹಾಕಿಕೊಳ್ಳುವುದಾಗಿ ನಮೂದಿಸಲಾಗಿರುತ್ತದೆ. ಆದರೆ, 2ನೇ ವೃತ್ತದ 2ನೇ ಬಿಂದುವಿಗೆ ಇದುವರೆಗೂ ಮುಂಬಡ್ತಿ ನೀಡಿರುವುದಿಲ್ಲ, ಮುಂದುವರೆದು ಮೊದಲನೇ ವೃತ್ತದಲ್ಲಿ ಸಾಮಾನ್ಯ ಜೇಷ್ಠತೆಯಡಿ ಮುಂಬಡ್ತಿ ಹೊಂದಿದ ಪರಿಶಿಷ್ಠ ಪಂಗಡ ಪ್ರವರ್ಗದವರನ್ನು 2ನೇ ವೃತ್ತದ 2ನೇ ಬಿಂದುವಿಗೆ ಲೆಕ್ಕ ಹಾಕಿ ಕೊಳ್ಳುವುದು ಸೂಕ್ತವಲ್ಲ.**

ಮೇಲ್ಕಂಡ ಅಭಿಪ್ರಾಯದ ಪ್ರಕಾರ ಶ್ರೀಮತಿ ಮೀನಾ ನಾಯಕ್ ಇವರ ಅಧೀನ ಕಾರ್ಯದರ್ಶಿ ವೃಂದಕ್ಕೆ ಮುಂಬಡ್ತಿಗೆ ಸಂಬಂಧಿಸಿದಂತೆ ಸಚಿವಾಲಯದ ರೋಸ್ಟರ್‌ನ ಪ್ರಕಾರ ನಿಯಮಾನುಸಾರ 2ನೇ ವೃತ್ತದ 2ನೇ ಬಿಂದುವಿಗೆ ಸರಿದೂಗಿಸದೇ ಇರುವುದು ಖಚಿತವಾಗಿರುತ್ತದೆ.

ಮೇಲಿನ ಅಭಿಪ್ರಾಯದಲ್ಲಿ ಅಧೀನ ಕಾರ್ಯದರ್ಶಿ ವೃಂದಕ್ಕೆ ಮುಂಬಡ್ತಿ ನೀಡುವಲ್ಲಿ ಸ್ಪಷ್ಟತೆ ಇದ್ದರೂ ಸಹ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೇ ಪರಿಶಿಷ್ಟ ಪಂಗಡದ ಪ್ರವರ್ಗದಡಿ ನಿಗಧಿಯಾಗಿರುವ ಹುದ್ದೆಯನ್ನು

ಸಾಮಾನ್ಯ ವರ್ಗದ ಅಭ್ಯರ್ಥಿಯಾದ ಶ್ರೀಮತಿ ಕೆ.ಜೆ.ಜಲಜಾಕ್ಷಿ ಇವರಿಗೆ ಷರತ್ತು ಬದ್ಧವಾಗಿ ಪದೋನ್ನತಿ ನೀಡಲಾಗಿರುತ್ತದೆ.

ಅಧೀನ ಕಾರ್ಯದರ್ಶಿ ವೃಂದದಲ್ಲಿ ಪರಿಶಿಷ್ಟ ಪಂಗಡದ ಪ್ರವರ್ಗದಡಿ ಮೀಸಲಾಗಿದ್ದ ಹುದ್ದೆಗೆ ಎದುರಾಗಿ ಸಾಮಾನ್ಯ ಅಭ್ಯರ್ಥಿಗೆ ತಪ್ಪಾಗಿ ಮುಂಬಡ್ತಿ ನೀಡಿರುವುದು ನಿಯಮಬಾಹಿರವಾಗಿರುತ್ತದೆ. ಆದುದರಿಂದ, ಸದರಿ ತಪ್ಪನ್ನು ಸರಿಪಡಿಸಿ, ಶ್ರೀಮತಿ ಮೀನಾ ನಾಯಕ್ ಇವರು ನಿಯಮಾನುಸಾರ ಮುಂಬಡ್ತಿಗೆ ಅರ್ಹರಿದ್ದ ದಿನಾಂಕ:27.10.2021 ರಂದು ಶ್ರೀಮತಿ ಕೆ.ಜೆ.ಜಲಜಾಕ್ಷಿ ಯವರಿಗೆ ಅಧೀನ ಕಾರ್ಯದರ್ಶಿ ಹುದ್ದೆಗೆ Regularise ಮಾಡಿರುವುದನ್ನು ಪರಿಷ್ಕರಿಸಿ ಆಗಿರುವ ಲೋಪವನ್ನು ಸರಿಪಡಿಸುವಂತೆ ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಅದರಂತೆ, ಶ್ರೀಮತಿ ಮೀನಾ ನಾಯಕ್ ಇವರಿಗೆ ಅಧೀನ ಕಾರ್ಯದರ್ಶಿ ವೃಂದದಲ್ಲಿ ದಿನಾಂಕ 27.10.2021ಕ್ಕೆ ಜೇಷ್ಟತೆಯನ್ನು ಮರುಹೊಂದಾಣಿಕೆ ಮಾಡಿ ಮುಂಬಡ್ತಿ ನೀಡಲು ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಮುಂದುವರೆದು, ಶ್ರೀಮತಿ ಮೀನಾ ನಾಯಕ್ ರವರು ಅಧೀನ ಕಾರ್ಯದರ್ಶಿ ವೃಂದದಲ್ಲಿ ದಿನಾಂಕ: 27.10.2024ಕ್ಕೆ ಮೂರು ವರ್ಷಗಳ ಅರ್ಹತಾ ಅವಧಿಯನ್ನು ಪೂರೈಸಿ, ಕಾನೂನು ಪದವಿಯನ್ನು ಹೊಂದಿರುವುದರಿಂದ ದಿನಾಂಕ:೩೦.04.2023 ರಂದು ಉಪ ಕಾರ್ಯದರ್ಶಿ ಹುದ್ದೆಯಲ್ಲಿದ್ದ ಶ್ರೀ ಹೆಚ್.ಡಿ.ಪಾಟೀಲ್ ರವರ ವಯೋ ನಿವೃತ್ತಿಯಿಂದ ತೆರವಾದ ಉಪ ಕಾರ್ಯದರ್ಶಿ ಹುದ್ದೆಗೆ ಎದುರಿಗೆ ಉಪ ಕಾರ್ಯದರ್ಶಿ ವೃಂದಕ್ಕೆ ಮುಂಬಡ್ತಿ ಅರ್ಹತೆ ಹೊಂದಿರುತ್ತಾರೆ. ಆದುದರಿಂದ, ಶ್ರೀಮತಿ ಮೀನಾ ನಾಯಕ್, ಅಧೀನ ಕಾರ್ಯದರ್ಶಿ ಇವರಿಗೆ ಪೂರ್ವಾನ್ವಯವಾಗಿ ದಿನಾಂಕ:27.10.2024 ರಿಂದ ಅನ್ವಯವಾಗುವಂತೆ ಪೂರ್ವಾನ್ವಯವಾಗಿ ಉಪ ಕಾರ್ಯದರ್ಶಿ ವೃಂದಕ್ಕೆ ಮುಂಬಡ್ತಿ ನೀಡಲು ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

4. ಶ್ರೀಮತಿ ಕೆ.ಜೆ. ಜಲಜಾಕ್ಷಿ (ಸಾಮಾನ್ಯ ಪ್ರವರ್ಗ) ಇವರ ಪ್ರಕರಣ:

ಸಾಮಾನ್ಯ ಅಭ್ಯರ್ಥಿಯಾದ ಶ್ರೀಮತಿ ಕೆ.ಜೆ. ಜಲಜಾಕ್ಷಿ ಇವರು ಶಾಖಾಧಿಕಾರಿ ವೃಂದಕ್ಕೆ 371(ಜೆ) ಮೀಸಲಾತಿ ಪ್ರವರ್ಗದಡಿ ಮುಂಬಡ್ತಿ ಪಡೆದು ನಂತರ ಅಧೀನ ಕಾರ್ಯದರ್ಶಿ ವೃಂದಕ್ಕೆ ಪರಿಶಿಷ್ಟ ಪಂಗಡದ ಮೀಸಲಾತಿ ಅಡಿ 2ನೇ ವೃತ್ತದ 2ನೇ ಬಿಂದುವಿಗೆ ಎದುರಾಗಿ ಮುಂಬಡ್ತಿ ಹೊಂದಿರುತ್ತಾರೆ. ಅದರ ಆಧಾರದಲ್ಲಿ ಪಡೆದಿರುವ ಸೇವಾನುಭವವನ್ನು ಮರುಪರಿಶೀಲಿಸಿ ಅವರಿಗೆ ಅರ್ಹತೆಗನುಗುಣವಾಗಿ ಸಾಮಾನ್ಯ ಪ್ರವರ್ಗದಡಿ ಲಭ್ಯವಿರುವ ಅರ್ಹತಾ ದಿನಾಂಕವನ್ನು ಪುನರ್ ನಿಗಧಿಪಡಿಸಲು ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಸಾಮಾನ್ಯ ವರ್ಗದ ಅಭ್ಯರ್ಥಿಯಾದ ಶ್ರೀಮತಿ ಕೆ.ಜೆ.ಜಲಜಾಕ್ಷಿ ಇವರಿಗೆ ಪರಿಶಿಷ್ಟ ಪಂಗಡದ ಪ್ರವರ್ಗದಡಿ ಮೀಸಲಾಗಿದ್ದ ಅಧೀನ ಕಾರ್ಯದರ್ಶಿ ಹುದ್ದೆಗೆ ಎದುರಾಗಿ ದಿನಾಂಕ:10.07.2020 ರಿಂದ ಅನ್ವಯವಾಗುವಂತೆ ನೀಡಿರುವ ಮುಂಬಡ್ತಿಗೆ ಅರ್ಹತಾ ದಿನಾಂಕವನ್ನು ಮರುಪರಿಶೀಲಿಸಿ ನಿಯಮಾನುಸಾರ ಸಾಮಾನ್ಯ ಪ್ರವರ್ಗದಡಿ ರೋಸ್ಟರಿನ ಮೂರನೇ ಬಿಂದುವಿಗೆ ಎದುರಾಗಿ ಶ್ರೀ ಮೋಹನ್ ಕೆ.ಮುಗಳಿ, ಇವರು ಉಪ ಕಾರ್ಯದರ್ಶಿ ವೃಂದಕ್ಕೆ ಮುಂಬಡ್ತಿ ಹೊಂದಿದ್ದರಿಂದ ತೆರವಾಗಿರುವ ಅಧೀನ ಕಾರ್ಯದರ್ಶಿ ಹುದ್ದೆಗೆ ಶ್ರೀಮತಿ ಕೆ. ರೇಖಾ ಇವರಿಗೆ ದಿನಾಂಕ:೩೦.11.2021 ರಂದು ಮುಂಬಡ್ತಿ ನೀಡಿರುವುದನ್ನು ಮಾರ್ಪಡಿಸಿ, ಸದರಿ ದಿನಾಂಕಕ್ಕೆ ಅಂದರೆ ದಿನಾಂಕ:೩೦.11.2021 ಕ್ಕೆ ಶ್ರೀಮತಿ ಕೆ.ಜೆ. ಜಲಜಾಕ್ಷಿ ಇವರಿಗೆ ಅಧೀನ ಕಾರ್ಯದರ್ಶಿ ಹುದ್ದೆಗೆ ಜೇಷ್ಟತೆಯನ್ನು ಮರು ನಿಗಧಿಪಡಿಸಿ, ಈ ಕುರಿತು ಆಗಿರುವ ಲೋಪವನ್ನು ಸರಿಪಡಿಸುವಂತೆ ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಅಧೀನ ಕಾರ್ಯದರ್ಶಿ ವೃಂದದ ರೋಸ್ಟರ್ ಬಿಂದುವಿನ 4ನೇ ಬಿಂದುವಿಗೆ ಎದುರಾಗಿ ಶ್ರೀಮತಿ ಕೆ. ರೇಖಾ ಇವರಿಗೆ ವಾಸ್ತವವಾಗಿ ದಿನಾಂಕ:೩೦.11.2021 ರಂದು ನೀಡಲಾಗಿರುವ ಮುಂಬಡ್ತಿಯಲ್ಲಿ ಯಾವುದೇ ವ್ಯತ್ಯಾಸ ಇಲ್ಲದಿರುವುದನ್ನು ಗಮನಿಸಲಾಗಿದೆ.

ಶ್ರೀಮತಿ ಬಿ.ಆರ್. ಗಾಯಿತ್ರಿ, ಉಪ ಕಾರ್ಯದರ್ಶಿಯವರು ದಿನಾಂಕ:15.10.2024 ರಂದು ಜಂಟಿ ಕಾರ್ಯದರ್ಶಿ ವೃಂದಕ್ಕೆ ಮುಂಬಡ್ತಿ ಹೊಂದಿದ ಹಿನ್ನಲೆಯಲ್ಲಿ ತೆರವಾದ ಉಪ ಕಾರ್ಯದರ್ಶಿ ಹುದ್ದೆಗೆ

ಶ್ರೀಮತಿ ಕೆ.ಜೆ. ಜಲಜಾಕ್ಷಿ ರವರಿಗೆ ಈಗಾಗಲೇ ನಿಯಮಬಾಹಿರವಾಗಿ ದಿನಾಂಕ:17.08.2023 ರಂದು ಶ್ರೀ ಬಿ.ಐ. ಶಿವಕುಮಾರ್, ಉಪ ಕಾರ್ಯದರ್ಶಿ ಇವರ ವಯೋನಿವೃತ್ತಿಯಿಂದ ತೆರವಾದ ಹುದ್ದೆಗೆ ಉಪ ಕಾರ್ಯದರ್ಶಿ ವೃಂದಕ್ಕೆ ನೀಡಿರುವ ಮುಂಬಡ್ತಿ ಅರ್ಹತಾ ದಿನಾಂಕವನ್ನು ಪುನರ್ ಪರಿಶೀಲಿಸಿ ದಿನಾಂಕ:30.11.2024 ರಿಂದ ಅನ್ವಯವಾಗುವಂತೆ ಶ್ರೀಮತಿ ಕೆ.ಜೆ. ಜಲಜಾಕ್ಷಿ ಇವರಿಗೆ ಉಪ ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ ದಿನಾಂಕವನ್ನು ಮರು ನಿಗಧಿಪಡಿಸಲಾಗಿದೆ.

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಈ ಹಿಂದೆ ಪದೋನ್ನತಿ ನೀಡಿರುವ ದಾಖಲೆಗಳಲ್ಲಿ ಕಂಡುಬಂದ ತಪ್ಪುಗಳನ್ನು (Mistake apparent on records) ಸರಿಪಡಿಸುವ ಉದ್ದೇಶದಿಂದ ಹಾಗೂ ಸಂವಿಧಾನದ ಆಶಯದಂತೆ ಪರಿಶಿಷ್ಠ ಪಂಗಡ ಮೀಸಲಾತಿ (ಅನುಚ್ಛೇಧ 16) ಮತ್ತು ಕಲ್ಯಾಣ ಕರ್ನಾಟಕ ಮೀಸಲಾತಿಯಡಿ 371(ಜೆ) ಅಡಿ ನಿಯಮಾನುಸಾರ ಪದೋನ್ನತಿಗಳನ್ನು ಮರು ಪರಿಶೀಲಿಸುವುದರ ಮೂಲಕ ಸರಿಪಡಿಸಲು ಮೇಲಿನಂತೆ ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸುಗಳನ್ನು ಮಾಡಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಆದೇಶ ಸಂಖ್ಯೆ:ಕವಿಪ:ಆ–1:44:ಮುಂಬಡ್ತಿ:2025
ಬೆಂಗಳೂರು, ದಿನಾಂಕ:29.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಭಾರತದ ಸಂವಿಧಾನ ಅನುಚ್ಛೇಧ 16 ಮತ್ತು 371(ಜೆ) ರಡಿ ಹೊರಡಿಸಲಾಗಿರುವ ಆದೇಶಗಳ ಅನುಸಾರ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ:01.08.2023ರ ತೀರ್ಪಿನನ್ವಯ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಅಧಿಕಾರಿಗಳು ಮತ್ತು ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 2021ರ ನಿಯಮ 6(ii) ರ ಪ್ರಕಾರ ಮಾನ್ಯ ಸಭಾಪತಿಯವರಿಗೆ ಪ್ರದತ್ತವಾದ ಅಧಿಕಾರದ ರೀತ್ಯಾ ಮತ್ತು ಮೇಲೆ ವಿವರಿಸಿರುವಂತೆ ಇವರುಗಳಿಗೆ ನಿಗಧಿಪಡಿಸಲಾದ ಅರ್ಹತಾ ದಿನಾಂಕಗಳನ್ವಯ ಶ್ರೀ ಹೆಚ್.ಡಿ. ಪಾಟೀಲ್ (ದಿನಾಂಕ:30.04.2023 ರಂದು ಉಪ ಕಾರ್ಯದರ್ಶಿಯಾಗಿ ವಯೋ ನಿವೃತ್ತಿ) ಇವರಿಗೆ ದಿನಾಂಕ:08.07.2016 ರಿಂದ ಅನ್ವಯವಾಗುವಂತೆ ಅಧೀನ ಕಾರ್ಯದರ್ಶಿ ವೃಂದದ ವೇತನ ಶ್ರೇಣಿ ರೂ.28100–700–28800–800–33600–900–39000–1050–45300–1200–50100 ರಲ್ಲಿ ಹಾಗೂ ದಿನಾಂಕ:01.8.2020 ರಿಂದ ಉಪ ಕಾರ್ಯದರ್ಶಿ ವೃಂದದ ವೇತನ ಶ್ರೇಣಿ ರೂ.74400–1900–83900–2200–97100–2500–109600ರಲ್ಲಿ ಅರ್ಹತಾ ದಿನಾಂಕವನ್ನು ಪೂರ್ವಾನ್ವಯವಾಗಿ ಕರ್ನಾಟಕ ನಾಗರೀಕ ಸೇವಾ (ಮುಂಬಡ್ತಿ, ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ಅಧಿನಿಯಮ 1973 ರ ಕಲಂ 9 ರ ಅನುಸಾರ ಮುಂಬಡ್ತಿಗೆ ದಿನಾಂಕವನ್ನು ಮರು ನಿಗಧಿಪಡಿಸಲಾಗಿದೆ.

ಶ್ರೀಮತಿ ಜ್ಯೋತಿ (ಪ್ರಸ್ತುತ ಅಧೀನ ಕಾರ್ಯದರ್ಶಿ) ಇವರಿಗೆ ಹಿರಿಯ ಸಹಾಯಕ ವೃಂದಕ್ಕೆ ದಿನಾಂಕ:21.04.2014ಕ್ಕೆ ವೇತನ ಶ್ರೇಣಿ ರೂ.20000–500–21000–600–24600–700–28800–800–33600–900–36300 ರಲ್ಲಿ, ಶಾಖಾಧಿಕಾರಿ ವೃಂದಕ್ಕೆ ದಿನಾಂಕ: 21.04.2017 ರಿಂದ ವೇತನ ಶ್ರೇಣಿ ರೂ.22800–600–24600–700–28800–800–33600–900–39000–1050–43200 ರಲ್ಲಿ, ಅಧೀನ ಕಾರ್ಯದರ್ಶಿ ವೃಂದಕ್ಕೆ ದಿನಾಂಕ: 01.08.2020 ರಿಂದ ಅನ್ವಯವಾಗುವಂತೆ ವೇತನ ಶ್ರೇಣಿ ರೂ.52650–1250–53900–1450–62600–1650–72500–1900–83900–2200–97100 ರಲ್ಲಿ ಮತ್ತು ದಿನಾಂಕ: 01.08.2023 ರಿಂದ ಅನ್ವಯವಾಗುವಂತೆ ಉಪ ಕಾರ್ಯದರ್ಶಿ ವೃಂದದ ವೇತನ ಶ್ರೇಣಿ ರೂ.118700–3100–134200–3500–155200–4000–175200 ರಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಪೂರ್ವಾನ್ವಯವಾಗಿ ಕರ್ನಾಟಕ ನಾಗರೀಕ ಸೇವಾ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

(ಮುಂಬಡ್ತಿ, ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ಅಧಿನಿಯಮ 1973 ರ ಕಲಂ 9ರ ಅನುಸಾರ ಸ್ಥಾನಪನ್ನ ಬಡ್ತಿ ನೀಡಿ ನೇಮಕ ಮಾಡಲಾಗಿದೆ.

ಶ್ರೀಮತಿ ಮೀನಾನಾಯಕ್ (ಪ್ರಸ್ತುತ ಅಧೀನ ಕಾರ್ಯದರ್ಶಿ) ಅಧೀನ ಕಾರ್ಯದರ್ಶಿ ವೃಂದಕ್ಕೆ ದಿನಾಂಕ: 27.10.2021 ರಿಂದ ವೇತನ ಶ್ರೇಣಿ ರೂ.52650-1250-53900-1450-62600-1650-72500-1900-83900-2200-97100 ರಲ್ಲಿ ದಿನಾಂಕ: 27.10.2024 ರಿಂದ ಉಪ ಕಾರ್ಯದರ್ಶಿ ವೃಂದದ ವೇತನ ಶ್ರೇಣಿ ರೂ.118700-3100-134200-3500-155200-4000-175200 ರಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಪೂರ್ವಾನ್ವಯವಾಗಿ ಕರ್ನಾಟಕ ನಾಗರೀಕ ಸೇವಾ (ಮುಂಬಡ್ತಿ, ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ಅಧಿನಿಯಮ 1973ರ ಕಲಂ 9ರ ಅನುಸಾರ ಸ್ಥಾನಪನ್ನ ಮುಂಬಡ್ತಿ ನೀಡಿ ನೇಮಕ ಮಾಡಲಾಗಿದೆ.

ಮಾನ್ಯ ಸಭಾಪತಿಯವರ ಆದೇಶಾನುಸಾರ

ಎಸ್. ನಿರ್ಮಲ
ಕಾರ್ಯದರ್ಶಿ-2
ಕರ್ನಾಟಕ ವಿಧಾನ ಪರಿಷತ್ತು

PR-72

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

THAMMAIAH